# UNIVERSITY OF MYSORE

## Ph.D. Entrance Examination, November - 2020

**SUBJECT CODE : 3 8**

**QUESTION BOOKLET NO.** 506594

| Entrance Reg. No. | | | | | | |
|---|---|---|---|---|---|---|
| | | | | | | |

**QUESTION BOOKLET**

**(Read carefully the instructions given in the Question Booklet)**

**SUBJECT : KANNADA**

**MAXIMUM MARKS : 100** | **MAXIMUM TIME : THREE HOURS**

**(Including initial 10 minutes for filling O.M.R. Answer sheet)**

**INSTRUCTIONS TO THE CANDIDATES**

1. The sealed questions booklet containing 50 questions enclosed with O.M.R. Answer Sheet is given to you.
2. Verify whether the given question booklet is of the same subject which you have opted for examination.
3. Open the question paper seal carefully and take out the enclosed O.M.R. Answer Sheet outside the question booklet and fill up the general information in the O.M.R. Answer sheet. If you fail to fill up the details in the form of alphabet and signs as instructed, you will be personally responsible for consequences arising during scoring of your Answer Sheet.
4. During the examination:
   a) Read each question carefully.
   b) Determine the Most appropriate/correct answer from the four available choices given under each question.
   c) Completely darken the relevant circle against the Question in the O.M.R. Answer Sheet. For example, in the question paper if "C" is correct answer for Question No.8, then darken against Sl. No.8 of O.M.R. Answer Sheet using Blue/Black Ball Point Pen as follows:

   Question No. 8. Ⓐ Ⓑ ● Ⓓ (Only example) (Use Ball Pen only)
5. Rough work should be done only on the blank space provided in the Question Booklet. Rough work should not be done on the O.M.R. Answer Sheet.
6. If more than one circle is darkened for a given question, such answer is treated as wrong and no mark will be given. See the example in the O.M.R. Sheet.
7. The candidate and the Room Supervisor should sign in the O.M.R. Sheet at the specified place.
8. Candidate should return the original O.M.R. Answer Sheet and the university copy to the Room Supervisor after the examination.
9. Candidate can carry the question booklet and the candidate copy of the O.M.R. Sheet.
10. The calculator, pager and mobile phone are not allowed inside the examination hall.
11. **If a candidate is found committing malpractice, such a candidate shall not be considered for admission to the course and action against such candidate will be taken as per rules.**

**INSTRUCTIONS TO FILL UP THE O.M.R. SHEET**

1. There is only one most appropriate/correct answer for each question.
2. For each question, only one circle must be darkened with BLUE or BLACK ball point pen only. Do not try to alter it.
3. Circle should be darkened completely so that the alphabet inside it is not visible.
4. Do not make any stray marks on O.M.R. Sheet.

**ಗಮನಿಸಿ : ಸೂಚನೆಗಳ ಕನ್ನಡ ಆವೃತ್ತಿಯು ಈ ಪುಸ್ತಕದ ಹಿಂಭಾಗದಲ್ಲಿ ಮುದ್ರಿಸಲ್ಪಟ್ಟಿದೆ.**

## ಭಾಗ – ಎ

ಈ ಭಾಗವು 50 ಬಹು ಆಯ್ಕೆ/ ವಸ್ತುನಿಷ್ಠ ಪ್ರಕಾರದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ, ಪ್ರತಿಯೊಂದು ಪ್ರಶ್ನೆಯು ಒಂದು ಅಂಕವನ್ನು ಹೊಂದಿರುತ್ತದೆ. [50 × 1 = 50]

1. ಸಂಶೋಧನ ವಿಧಾನದಲ್ಲಿ ಯಾವುದನ್ನು ಪ್ರಾಥಮಿಕ ಹಂತ ಎಂದು ಪರಿಗಣಿಸಲಾಗುತ್ತದೆ.

(ಎ) ವಿಂಗಡಣೆ (ಬಿ) ವಸ್ತು ವಿಶ್ಲೇಷಣೆ

(ಸಿ) ವಸ್ತು ಊಹಾತ್ಮಕ ಗ್ರಹಿಕೆ (ಡಿ) ಆಕರಗಳ ಸಂಗ್ರಹ

2. ಪ್ರದರ್ಶನ ಸಿದ್ಧಾಂತವನ್ನು ಯಾವ ಸಂಶೋಧನೆಯಲ್ಲಿ ಅಳವಡಿಸಲಾಗುತ್ತದೆ.

(ಎ) ಸಾಹಿತ್ಯ ಸಂಶೋಧನೆ (ಬಿ) ಸಂಸ್ಕೃತಿ ಸಂಶೋಧನೆ

(ಸಿ) ಜಾನಪದ ಸಂಶೋಧನೆ (ಡಿ) ಪಠ್ಯ ಸಂಶೋಧನೆ

3. ದುರ್ಬಲ ಆಧಾರಗಳ ಮೇಲೆ ಸಂಶೋಧನೆಯಲ್ಲಿ____ನ್ನು ಸ್ಥಾಪಿಸಲಾಗುವುದಿಲ್ಲ.

(ಎ) ಸಿದ್ಧಾಂತ (ಬಿ) ಕ್ಯೂಮಿಲೇಟಿವ್

(ಸಿ) ಅಧ್ಯಯನದ ಉದ್ದೇಶ (ಡಿ) ಪೂರಕ ಸಾಮಗ್ರಿ

4. ಕರ್ನಲ್ ಮೆಕೆಂಜಿ, ಫ್ಲೀಟ್, ರೈಸ್ ಮೊದಲಾದವರಿಂದ ರೂಪುಗೊಂಡ ಪ್ರಥಮ ಘಟ್ಟವನ್ನು_____ಎಂದು ಕರೆಯುತ್ತಾರೆ.

(ಎ) ಅನನ್ಯ ಸಂಶೋಧನ ಘಟ್ಟ (ಬಿ) ಆಕರ ಸಾಮಗ್ರಿ ಸಂಶೋಧನ ಘಟ್ಟ

(ಸಿ) ಆಕೃತಿ ಸಂಶೋಧನ ಘಟ್ಟ (ಡಿ) ಪರಿಪೂರ್ಣ ಸಂಶೋಧನ ಘಟ್ಟ

5. ಎಥ್‌ನೊಗ್ರಾಫಿಕ್ ಸ್ಟಡಿ (Ethnographic Study) ಎಂದರೆ.

(ಎ) ಭಾಷಾ ಅಧ್ಯಯನ (ಬಿ) ಪ್ರಾದೇಶಿಕ ಅಧ್ಯಯನ

(ಸಿ) ಜನಾಂಗೀಯ ಅಧ್ಯಯನ (ಡಿ) ಪರಿಕಲ್ಪನಾತ್ಮಕ ಅಧ್ಯಯನ

6. ಬಸವಣ್ಣನ ಇತಿವೃತ್ತಕ್ಕೆ ಆಕರವಾಗಿರುವ ಶಾಸನ ಯಾವುದು?

(ಎ) ಶಿರಸಂಗಿ ಶಾಸನ (ಬಿ) ಬಸವಕಲ್ಯಾಣ ಶಾಸನ

(ಸಿ) ಅರ್ಜುನವಾಕ ಶಾಸನ (ಡಿ) ಕೂಡಲಸಂಗಮ ಶಾಸನ

7. 1924ರ ಹೊತ್ತಿಗೆ ಸರ್ವಜ್ಞನ ಸಮಗ್ರ ವಚನಗಳನ್ನು ಶೋಧಿಸಿ ಶ್ರದ್ಧೆಯಿಂದ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ.

(ಎ) ಎಸ್.ಜಿ. ನರಸಿಂಹಾಚಾರ್ (ಬಿ) ಎನ್. ಆರ್. ಕರಿಬಸವಶಾಸ್ತ್ರೀ

(ಸಿ) ಚನ್ನಪ್ಪ ಉತ್ತಂಗಿ (ಡಿ) ಎಚ್. ದೇವಿರಪ್ಪ

8. 'EC' ಎಂದರೆ

(ಎ) ಎಫಿಗ್ರಾಫಿಯ ಇಂಡಿಕಾ (ಬಿ) ಎಫಿಗ್ರಾಫಿಯ ಕನ್ನಡ

(ಸಿ) ಎಫಿಗ್ರಾಫಿಯ ನಾರ್ಡ್‌ಕೆನರ (ಡಿ) ಎಫಿಗ್ರಾಫಿಯ ಕರ್ನಾಟಕ

9. ಮದ್ರಾಸ್ ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ಸ್‌ಲೈಬ್ರರಿಯ ಯಾವ ಕಾರಣಕ್ಕಾಗಿ ಮುಖ್ಯವಾಗುತ್ತಿದೆ.

(ಎ) ಕಾವ್ಯ ಶಾಸನ ಸಂಗ್ರಹ (ಬಿ) ಹಸ್ತ ಪ್ರತಿ ಸಂಗ್ರಹ

(ಸಿ) ಗ್ರಂಥ ಪ್ರತಿಶಾಸ್ತ್ರ ಸಂಗ್ರಹ (ಡಿ) ಕ್ಯಾಟ್‌ಲಾಗ್ ಸಂಗ್ರಹ

10. ವಿಜ್ಞಾನ ಕ್ಷೇತ್ರದ ಸಂಶೋಧನೆಯು ಹೇಗಿರುತ್ತದೆ?

(ಎ) ಅನ್ವಯಾತ್ಮಕವಾಗಿರುತ್ತದೆ (ಬಿ) ವಿವರಣಾತ್ಮಕವಾಗಿರುತ್ತದೆ

(ಸಿ) ಅನ್ವೇಷಣಾತ್ಮಕವಾಗಿರುತ್ತದೆ (ಡಿ) ಆವಿಷ್ಕರಣಾತ್ಮಕವಾಗಿರುತ್ತದೆ

11. ಕನ್ನಡ ಸಂಶೋಧನಾ ಕೈಪಿಡಿ ಕೃತಿಯ ಲೇಖಕರು.

(ಎ) ಎಂ. ಚಿದಾನಂದಮೂರ್ತಿ (ಬಿ) ಸಂಗಮೇಶ ಸವದತ್ತಿಮಠ

(ಸಿ) ಎಂ.ಎಂ. ಕಲಬುರ್ಗಿ (ಡಿ) ಬಿ.ವ್ಹಿ. ಶಿರೂರ

12. ಏಷಿಯಾ ಖಂಡವನ್ನು ಕುರಿತು ಸಾಂಸ್ಕೃತಿಕ ಅಧ್ಯಯನವನ್ನು ಆಂಗ್ಲರು ಹೀಗೆ ಕರೆದಿದ್ದಾರೆ.

(ಎ) ಇಂಡಾಲಜಿ
(ಬಿ) ಓರಿಯಂಟಾಲಜಿ
(ಸಿ) ಆ್ಯಂತ್ರೊಪಾಲಜಿ
(ಡಿ) ಏಷಿಯಾಲಜಿ

13. 'ಪರಿವಿಡಿ' ಎಂದರೆ.

(ಎ) ಮಾಹಿತಿ ಸಂಗ್ರಹ
(ಬಿ) ವಿವಿಧ ಅಧ್ಯಾಯಗಳು ಹಾಗೂ ಪುಟ ಸಂಖ್ಯೆ ವಿವರ
(ಸಿ) ರೇಖಾ ಚಿತ್ರಗಳು
(ಡಿ) ದತ್ತಾಂಶದ ವಿವರ

14. 'ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಸ್ಥಾಪನೆಗೊಂಡ ವರ್ಷ.

(ಎ) 1891
(ಬಿ) 1884
(ಸಿ) 1858
(ಡಿ) 1892

15. 'ಸಂಸಾರ ಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಿದೆ ನೋಡಾ' ಈ ವಚನದ ಭಾಗ ಯಾರದು?

(ಎ) ಅಕ್ಕಮಹಾದೇವಿ
(ಬಿ) ಬಸವಣ್ಣ
(ಸಿ) ಅಂಬಿಗರ ಚೌಡಯ್ಯ
(ಡಿ) ಆಯ್ದಕ್ಕಿ ಲಕ್ಕಮ್ಮ

16. ಕುಮಾರ ವಾಲ್ಮೀಕಿ ಕೃತಿ.

(ಎ) ಮೈರಾವಣ ಕಾಳಗ
(ಬಿ) ವಿವೇಕ ಚಿಂತಾಮಣಿ
(ಸಿ) ಕುಮಾರ ರಾಯನ ಕಥೆ
(ಡಿ) ಸನತ್ಕುಮಾರ ಚರಿತೆ

17. ವಾರ್ಧಕ ಷಟ್ಪದಿಯಲ್ಲಿ ಕಾವ್ಯವನ್ನು ರಚಿಸಿದವರು.

1) ಲಕ್ಷ್ಮೀಶ ಮತ್ತು ಕುಮಾರ ವಾಲ್ಮೀಕಿ
2) ಲಕ್ಕಣ ದಂಡೇಶ ಮತ್ತು ವಿರುಪಾಕ್ಷಪಂಡಿತ
3) ಕುಮಾರವ್ಯಾಸ ಮತ್ತು ಕುಮಾರ ವಾಲ್ಮೀಕಿ
4) ಸಾಳ್ವ ಮತ್ತು ಭೀಮಕವಿ

ಸರಿ ಉತ್ತರ:

(ಎ) 1, 2
(ಬಿ) 1, 4
(ಸಿ) 3, 4
(ಡಿ) 1, 3

18. 'ದಲಿತ ಸೂರ್ಯ' ಯಾರನ್ನು ಕುರಿತ ಕೃತಿ.

(ಎ) ದೇವನೂರು ಮಹಾದೇವ (ಬಿ) ಸಿದ್ದಲಿಂಗಯ್ಯ

(ಸಿ) ಬಿ.ಆರ್. ಅಂಬೇಡ್ಕರ್ (ಡಿ) ಮಹಾತ್ಮಗಾಂಧೀ

19. ಅನುಪಮಾ ನಿರಂಜನ ಅವರ 'ಮಾಧವಿ' ಕಾದಂಬರಿ ಈ ಕೃತಿಯಿಂದ ಪ್ರೇರಣೆಗೊಂಡಿದೆ.

(ಎ) ಚಮ್ಮೀನ್ (ಬಿ) ಯುಗಾಂತ

(ಸಿ) ಸಾವಿತ್ರಿ (ಡಿ) ಜೋಗವ್ವ

20. 'ಮುಳ್ಳುಗಳು' ಕಥಾಸಂಕಲನದ ಕರ್ತೃ.

(ಎ) ಸಾರಾ ಆಬೂಬಕರ್ (ಬಿ) ವೈದೇಹಿ

(ಸಿ) ವಿಜಯಾ ದಬ್ಬೆ (ಡಿ) ವೀಣಾ ಶಾಂತೇಶ್ವರ

21. ಇದು ಖಂಡ ಕಾವ್ಯ.

(ಎ) ಶ್ರೀರಾಮ ಪಟ್ಟಾಭೀಷೇಕ (ಬಿ) ಯುಗ ಸಂಧ್ಯಾ

(ಸಿ) ಶ್ರೀಹರಿಚರಿತೆ (ಡಿ) ಚಿತ್ರಾಂಗದ

22. 'ಸರಕುಗಳು' ಕಾದಂಬರಿಯ ಕರ್ತೃ.

(ಎ) ಫಕೀರ್ ಮಹಮದ್ ಕಟ್ಪಾಡಿ (ಬಿ) ಸಾರಾ ಅಬೂಬಕರ್

(ಸಿ) ರಂಜಾನ್ ದರ್ಗಾ (ಡಿ) ಬಾನು ಮುಷ್ತಾಕ್

23. ಶ್ರೀಶಂಕುಕನು ಭರತನ ರಸಸೂತ್ರ ವ್ಯಾಖ್ಯಾನಿಸುತ್ತ ನಿರ್ಮಿಸಿದ ಪರಿಭಾಷೆ.

(ಎ) ಅನುಮಿತಿ ವಾದ (ಬಿ) ಭಾವಕತ್ವ

(ಸಿ) ಚಿತ್ರತುರಗ ನ್ಯಾಯ (ಡಿ) ಗುಣೀಭೂತ ವ್ಯಂಗ್ಯ

24. ಕಾವ್ಯಾಸ್ವಾದನೆಗೆ ಎದುರಾಗುವ ವಿಘ್ನಗಳ ಸಂಖ್ಯೆ–.

(ಎ) 7 (ಬಿ) 6

(ಸಿ) 5 (ಡಿ) 10

**25.** ಪರಿಸರ ವಾತಾವರಣ ಸಂದರ್ಭ ಘಟನೆಗಳಿಂದ ಪ್ರಚೋದಿತವಾಗಿ ಬೆಳೆಯುವ ವಿಭಾವವನ್ನು ಹೀಗೆನ್ನುತ್ತಾರೆ.

(ಎ) ಆಲಂಬನ ವಿಭಾಗ (ಬಿ) ಉದ್ದೀಪನ ವಿಭಾಗ

(ಸಿ) ಅನುಭಾವ (ಡಿ) ಸ್ವಭಾವ

**26.** ಇವುಗಳಲ್ಲಿ ಯಾವುವು ಹೊಂದಾಣಿಕೆಯಾಗುತ್ತವೆ.

1) Aesthetics–ಸೌಂದರ್ಯಮೀಮಾಂಸೆ

2) Tension–ಕರ್ಷಣ

3) Irony–ಆಶಯ

4) Motif–ವ್ಯಂಗ್ಯ

(ಎ) 1 ಮತ್ತು 2 (ಬಿ) 2 ಮತ್ತು 3

(ಸಿ) 1 ಮತ್ತು 4 (ಡಿ) 2 ಮತ್ತು 4

**27.** ಬಿ.ಎಂ.ಶ್ರೀ ಅವರ 'ಅಶ್ವತ್ಥಾಮನ್' ನಾಟಕಕ್ಕೆ ಪ್ರೇರಣೆ ನೀಡಿದ ಕೃತಿ.

(ಎ) ಏಜಾಕ್ಸ್ (ಬಿ) ತಾರ್ತೂಫ್

(ಸಿ) ಮ್ಯಾಕ್‌ಬೆತ್ (ಡಿ) ದಿ ಟೆಂಪೆಸ್ಟ್

**28.** 'ಕನ್ನಡ ಛಂದೋವಿಕಾಸ' ಕೃತಿಯ ಕರ್ತೃ.

(ಎ) ಡಿ.ಎಸ್. ಕರ್ಕಿ (ಬಿ) ತೀ.ನಂ. ಶ್ರೀಕಂಠಯ್ಯ

(ಸಿ) ಟಿ.ವಿ. ವೆಂಕಟಾಚಲಶಾಸ್ತ್ರಿ (ಡಿ) ಎಲ್. ಬಸವರಾಜು

**29.** ಕಂದ ಪದ್ಯದ ಲಕ್ಷಣವನ್ನು ಮೊದಲು ಪ್ರಸ್ತಾಪಿಸಿದ ಛಾಂದಸಿಗ.

(ಎ) ನಾಗವರ್ಮ– I (ಬಿ) ನಾಗವರ್ಮ– II

(ಸಿ) ಈಶ್ವರ ಕವಿ (ಡಿ) ಜಯಕೀರ್ತಿ

**30.** ಚರಣದ ಕೊನೆಯಲ್ಲಿ ಬಿಡಿಯಾಗಿ ನಿಂತು ಮುಕ್ತಾಯ ಕೊಡುವ ಅಕ್ಷರ

(ಎ) ಪದ್ಮಗಣ (ಬಿ) ಮೌನ

(ಸಿ) ಮುಡಿ (ಡಿ) ಅನಾಗತ

31. ದ್ವಿತೀಯಾ ವಿಭಕ್ತಿ ಪ್ರತ್ಯಯವು.

(ಎ) ಕರ್ತೃಕಾರಕ (ಬಿ) ಕರ್ಮಕಾರಕ

(ಸಿ) ಸಂಪ್ರದಾನಕಾರಕ (ಡಿ) ಅಪಾದಾನಕಾರಕ

32. ರಾಬರ್ಟ್ ಕಾಲ್ಡ್‌ವೆಲ್ ಅವರ ಕೃತಿ.

(ಎ) ಎ ಕಂಪ್ಯಾರಿಟಿವ್ ಗ್ರಾಮರ್ ಆಫ್ ದ್ರವಿಡಿಯನ್ ಆರ್ ಸೌತ್ ಇಂಡಿಯನ್ ಲಾಂಗ್ವೇಜಸ್

(ಬಿ) ಎ ಹಿಸ್ಟರಿ ಆಫ್ ತಮಿಳ್ ಲಾಂಗ್ವೇಜ್

(ಸಿ) ಎ ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್

(ಡಿ) ದ್ರವಿಡಿಯನ್ಸ್ ಲಿಂಗ್ವಿಸ್ಟಿಕ್ಸ್

33. ಗೊಂಡಿ ಮಾಲ್ತೋ ಕುಇ ಇವು ಗ್ರಿಯರ್‌ಸನ್ ಪ್ರಕಾರ ದ್ರಾವಿಡ ಭಾಷೆಗಳಲ್ಲಿ ಯಾವ ಗುಂಪಿಗೆ ಸೇರುತ್ತವೆ.

(ಎ) ಮಧ್ಯ ದ್ರಾವಿಡ ಗುಂಪು (ಬಿ) ವಾಯುವ್ಯ ದ್ರಾವಿಡ ಗುಂಪು

(ಸಿ) ಆಂಧ್ರ ದ್ರಾವಿಡ ಗುಂಪು (ಡಿ) ಅರ್ಧ ದ್ರಾವಿಡ ಗುಂಪು

34. 'ಗುಡಾರದ ಕವಿಯಂತಿರೆ ಮುಚ್ಚಿಪೋದ ಕವಿಯಂ ಕವಿಯೇ'–ಎಂಬ ಸೂಕ್ತಿ ಇರುವ ಕಾವ್ಯ.

(ಎ) ಅಜಿತ ತೀರ್ಥಂಕರ ಪುರಾಣ ತಿಲಕಂ (ಬಿ) ಅನುಭವ ಮುಕುರಂ

(ಸಿ) ನೇಮಿನಾಥ ಪುರಾಣಂ (ಡಿ) ಕಾವ್ಯಾವಲೋಕನಂ

35. ಕರ್ಮಧಾರೆಯ ಸಮಾಸಕ್ಕೆ ಉದಾಹರಣೆ.

(ಎ) ತೆಳ್ಗದುಮ (ಬಿ) ಇರ್ಪಂಡಿರ್

(ಸಿ) ಕಡುಚಾಗಿ (ಡಿ) ಕನ್ನಡವಕ್ಕಿ

36. 'Folklore' ಪದವನ್ನು ಮೊದಲು ಬಳಸಿದ ವಿದ್ವಾಂಸ.

(ಎ) ಎಡ್ವರ್ಡ್ ಕ್ಲಾಡ್ (ಬಿ) ಆರ್.ಎಸ್. ಬಾಗ್ಸ್

(ಸಿ) ವಿಲಿಯಂ ಥಾಮ್ಸ್ (ಡಿ) ಇ.ಬಿ. ಟೇಲರ್

37. 'ಬನದ ಕರಡಿಗೆ ನಿಮ್ಮ ಭಗವದ್‌ಗೀತೆಬೇಡ' ಇದು ಯಾವ ಕವನದ ಸಾಲು?

(ಎ) ಗಿರಣಿ (ಬಿ) ನೆರಳು

(ಸಿ) ಅತಿಥಿ (ಡಿ) ಅವ್ವ

38. 'ಮರೆತೆನಂದರೆ ಮರೆಯಲಿ ಹ್ಯಾಂಗ ಮಾಉತ್ಸೆತುಂಗ' ಈ ಸಾಲನ್ನು ಬರೆದ ಕವಿ.

(ಎ) ಚಂದಶೇಖರ ತಾಳ್ಯ
(ಬಿ) ಚಂದ್ರಶೇಖರ ಪಾಟೀಲ
(ಸಿ) ಚಂದ್ರಶೇಖರ ಕಂಬಾರ
(ಡಿ) ಚಂದ್ರಶೇಖರ ಮೇಲಿನಮನಿ

39. 'ಯಾರ ಜಪ್ತಿಗೂ ಸಿಗದ ನವಿಲುಗಳು' ಈ ವಿಮರ್ಶೆಯು ಯಾವ ಕೃತಿಯ ಕುರಿತಂತೆ ಇದೆ.

(ಎ) ಸಾಕವ್ವ
(ಬಿ) ಕುಸುಮ ಬಾಲೆ
(ಸಿ) ಕುಸುಮ ಲೀಲೆ
(ಡಿ) ದೇವನೂರು ಮಹಾದೇವ ಅವರ ಆಯ್ದ ಕತೆಗಳು.

40. "ಕವಿಯ ಜೀವನ ಚರಿತ್ರೆಯೆಂದರೆ ಅವನ ಕವನಗಳೆ : ಉಳಿದದೆಲ್ಲವೂ ಬರಿಯ ಅಡಿಟಿಪ್ಪಣಿ" ಈ ಮಾತನ್ನು ಹೇಳಿದ ಕವಿ ಮತ್ತು ಕೃತಿಯ ಹೆಸರೇನು.

(ಎ) ಶಿವರಾಮ ಕಾರಂತ-ಮರಳಿ ಮಣ್ಣಿಗೆ
(ಬಿ) ಬೇಂದ್ರೆ-ನಾಲ್ಕು ತಂತಿ
(ಸಿ) ಕುವೆಂಪು-ನೆನಪಿನ ದೋಣಿ
(ಡಿ) ಪು.ತಿ.ನ.-ಶ್ರೀ ಹರಿ ಚರಿತೆ

41. 'ರಸೋ ವೈಸಃ' ಎಂಬ ತತ್ತ್ವವು ಧ್ವನಿಗೆ ಇಟ್ಟ ಕಳಸವಾಗಿದೆ.

(ಎ) ಅಲಂಕಾರ ಧ್ವನಿ
(ಬಿ) ದರ್ಶನ ಧ್ವನಿ
(ಸಿ) ರಸ ಧ್ವನಿ
(ಡಿ) ಪ್ರಬಂಧ ಧ್ವನಿ

42. 'ಕುವೆಂಪು ಅವರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕಗಳು' ಈ ವಿಮರ್ಶಾ ಲೇಖನದ ಕರ್ತೃ ಯಾರು?

(ಎ) ಎಲ್.ಸಿ. ಸುಮಿತ್ರಾ
(ಬಿ) ಬಿ.ಎನ್. ಸುಮಿತ್ರಾ ಬಾಯಿ
(ಸಿ) ಸುಮಿತ್ರಾ ದೇವಿ
(ಡಿ) ಸುಮಿತ್ರಾ ದೇವಿ ತಾಯಿ

43. ಕಮ್ಯುನಿಕೇಶನ್ ತತ್ತ್ವದ ಕರ್ತೃ________

(ಎ) ಹೊರೇಸ್
(ಬಿ) ತಿ.ಎ. ರಿಚರ್ಡ್ಸ್
(ಸಿ) ಲಾಂಜಿನಸ್
(ಡಿ) ಟಿ.ಎಸ್. ಎಲಿಯಟ್

44. 'In the most general sense, Distance is factor in all arts' ಎಂದು ಹೇಳಿದ ವಿಮರ್ಶಕ.

(ಎ) ಅರಿಸ್ಟಾಟಲ್ (ಬಿ) ಪ್ಲೇಟೋ

(ಸಿ) ಎಡ್ವರ್ಡ್ ಬುಲ್ಲೋ (ಡಿ) ಮೈಕಲ್ ಬಾಕ್ತಿನ್

45. 'ಚಿರಸ್ಮರಣೆ ಕಾದಂಬರಿಯ ಕರ್ತೃ________

(ಎ) ದೇವುಡು (ಬಿ) ಕೆ.ವಿ. ಪುಟ್ಟಪ್ಪ

(ಸಿ) ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಡಿ) ನಿರಂಜನ

46. ವಿಮರ್ಶೆಗೆ ಒಂದು________ಉದ್ದೇಶವಿರುತ್ತದೆ.

(ಎ) ಪಥ್ಯದ (ಬಿ) ತಾತ್ವಿಕವಾದ

(ಸಿ) ಸೈದ್ಧಾಂತಿಕ (ಡಿ) ರಾಚನಿಕ

47. 'ಹರಿಯ ಬಾಯ ಹಾಲು, ಉರಿಯ ಕೈಯ ಬೆಣ್ಣೆ ಗಿರಿಯ ಮೇಲಣ ಶಿಶು ಹರಿದಾಡುತ್ತಿದೆ' ಈ ಸಾಲನ್ನು ಬರೆದ ಕವಿ ಯಾರು?

(ಎ) ಅಕ್ಕಮಹಾದೇವಿ (ಬಿ) ಅಲ್ಲಮ ಪ್ರಭು

(ಸಿ) ಅಜಗಣ್ಣ (ಡಿ) ಬಸವಣ್ಣ

48. ಮಂಟೇಸ್ವಾಮಿ ಯಾರು?

(ಎ) ಜಾನಪದ ರೈತ (ಬಿ) ಚಾರಿತ್ರಿಕ ವ್ಯಕ್ತಿ

(ಸಿ) ಜಾನಪದ ಅನುಭಾವಿ ಕಾವ್ಯದ ನಾಯಕ (ಡಿ) ಜಾನಪದ ಕಥನ ಕ್ರಮ

49. 'ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ' ಇದು ಯಾರು ಬರೆದ ಸಾಲು.

(ಎ) ಆನಂದವರ್ಧನ (ಬಿ) ಅಭಿನವಗುಪ್ತ

(ಸಿ) ಕ್ಷೇಮೇಂದ್ರ (ಡಿ) ಕುಂಪಕ

50. ಐ.ಎ ರಿಚರ್ಡ್ಸ್‌ನ 'ಸಿನೆಸ್ತೀಸಿಸ್' ಪರಿಭಾಷೆಯ ಅರ್ಥವೇನು?

(ಎ) ಕಾವ್ಯನುಭವ (ಬಿ) ಲೋಕಾನುಭವ

(ಸಿ) ಸಮಷ್ಟಿ ರೂಪಾನುಭವ (ಡಿ) ಸಮಷ್ಟಿ ಸೌಂದರ್ಯಾನುಭವ

## ಭಾಗ – ಬಿ

**ಈ ಭಾಗವು ಐದು ಪ್ರಶ್ನೆಗಳನ್ನು ಹೊಂದಿರುತ್ತದೆ, ಪ್ರತಿ ಪ್ರಶ್ನೆಯು ಹತ್ತು ಅಂಕಗಳನ್ನು ಹೊಂದಿರುತ್ತದೆ.**

**[5 × 10 = 50]**

1. ಪ್ರಾಚೀನ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳನ್ನು ಹಾಗೂ ಅವುಗಳ ಪ್ರೇರಣೆ ಪ್ರಭಾವಗಳನ್ನು ವಿಶ್ಲೇಷಣಾತ್ಮಕವಾಗಿ ಬರೆಯಿರಿ.

2. ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಕನ್ನಡ ಸಾಹಿತ್ಯದ ಸ್ವರೂಪ ಲಕ್ಷಣಗಳನ್ನು ಉದಾಹರಣೆಗಳನ್ನು ನೀಡಿ ವಿವರಿಸಿ.

3. ಭಾರತೀಯ ಕಾವ್ಯತತ್ತ್ವಗಳ ವಿಮರ್ಶೆಯಾಗಿ ಧ್ವನಿ ಪ್ರಭೇದಗಳು ಹಾಗೂ ರಸಧ್ವನಿ ತತ್ತ್ವದ ಮಹತ್ವವನ್ನು ವಿವರಿಸಿ.

4. ಸಂಶೋಧನೆಯ ಸ್ವರೂಪ ಅರ್ಥ ವ್ಯಾಪ್ತಿ ಹಾಗೂ ಸಂಶೋಧಕರ ಅರ್ಹತೆಗಳನ್ನು ಚರ್ಚಿಸಿ.

5. ಕನ್ನಡ ವಿಮರ್ಶೆಯ ಸ್ವರೂಪ ಮತ್ತು ಬೆಳವಣಿಗೆಯ ವಿವಿಧ ಪಂಥಗಳನ್ನು ವಿಶ್ಲೇಷಿಸಿರಿ.

✡ ✡ ✡

## Rough Work

## <u>ಅಭ್ಯರ್ಥಿಗಳಿಗೆ ಸೂಚನೆಗಳು</u>

1. ಓ.ಎಂ.ಆರ್. ಉತ್ತರ ಹಾಳೆಯ ಜೊತೆಗೆ 50 ಪ್ರಶ್ನೆಗಳನ್ನು ಹೊಂದಿರುವ ಮೊಹರು ಮಾಡಿದ ಪ್ರಶ್ನೆ ಪುಸ್ತಕವನ್ನು ನಿಮಗೆ ನೀಡಲಾಗಿದೆ.
2. ಕೊಟ್ಟಿರುವ ಪ್ರಶ್ನೆ ಪುಸ್ತಕವು, ನೀವು ಪರೀಕ್ಷೆಗೆ ಆಯ್ಕೆ ಮಾಡಿಕೊಂಡಿರುವ ವಿಷಯಕ್ಕೆ ಸಂಬಂಧಿಸಿದ್ದೇ ಎಂಬುದನ್ನು ಪರಿಶೀಲಿಸಿರಿ.
3. ಪ್ರಶ್ನೆ ಪತ್ರಿಕೆಯ ಮೊಹರನ್ನು ಜಾಗ್ರತೆಯಿಂದ ತೆರೆಯಿರಿ ಮತ್ತು ಪ್ರಶ್ನೆಪತ್ರಿಕೆಯಿಂದ ಓ.ಎಂ.ಆರ್. ಉತ್ತರ ಹಾಳೆಯನ್ನು ಹೊರಗೆ ತೆಗೆದು, ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಸಾಮಾನ್ಯ ಮಾಹಿತಿಯನ್ನು ತುಂಬಿರಿ. ಕೊಟ್ಟಿರುವ ಸೂಚನೆಯಂತೆ ನೀವು ನಮೂನೆಯಲ್ಲಿನ ವಿವರಗಳನ್ನು ತುಂಬಲು ವಿಫಲರಾದರೆ, ನಿಮ್ಮ ಉತ್ತರ ಹಾಳೆಯ ಮೌಲ್ಯಮಾಪನ ಸಮಯದಲ್ಲಿ ಉಂಟಾಗುವ ಪರಿಣಾಮಗಳಿಗೆ ವೈಯಕ್ತಿಕವಾಗಿ ನೀವೇ ಜವಾಬ್ದಾರರಾಗಿರುತ್ತೀರಿ.
4. ಪರೀಕ್ಷೆಯ ಸಮಯದಲ್ಲಿ:
   a) ಪ್ರತಿಯೊಂದು ಪ್ರಶ್ನೆಯನ್ನು ಜಾಗ್ರತೆಯಿಂದ ಓದಿರಿ.
   b) ಪ್ರತಿ ಪ್ರಶ್ನೆಯ ಕೆಳಗೆ ನೀಡಿರುವ ನಾಲ್ಕು ಲಭ್ಯ ಆಯ್ಕೆಗಳಲ್ಲಿ ಅತ್ಯಂತ ಸರಿಯಾದ/ ಸೂಕ್ತವಾದ ಉತ್ತರವನ್ನು ನಿರ್ಧರಿಸಿ.
   c) ಓ.ಎಂ.ಆರ್. ಹಾಳೆಯಲ್ಲಿನ ಸಂಬಂಧಿಸಿದ ಪ್ರಶ್ನೆಯ ವೃತ್ತಾಕಾರವನ್ನು ಸಂಪೂರ್ಣವಾಗಿ ತುಂಬಿರಿ. ಉದಾಹರಣೆಗೆ, ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆ ಸಂಖ್ಯೆ 8ಕ್ಕೆ "C" ಸರಿಯಾದ ಉತ್ತರವಾಗಿದ್ದರೆ, ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಬಳಸಿ ಓ.ಎಂ.ಆರ್. ಉತ್ತರ ಹಾಳೆಯ ಕ್ರಮ ಸಂಖ್ಯೆ 8ರ ಮುಂದೆ ಈ ಕೆಳಗಿನಂತೆ ತುಂಬಿರಿ:

   ಪ್ರಶ್ನೆ ಸಂಖ್ಯೆ 8.Ⓐ Ⓑ ● Ⓓ (ಉದಾಹರಣೆ ಮಾತ್ರ) (ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ)
5. ಉತ್ತರದ ಪೂರ್ವಸಿದ್ಧತೆಯ ಬರವಣಿಗೆಯನ್ನು (ಚಿತ್ತು ಕೆಲಸ) ಪ್ರಶ್ನೆ ಪತ್ರಿಕೆಯಲ್ಲಿ ಒದಗಿಸಿದ ಖಾಲಿ ಜಾಗದಲ್ಲಿ ಮಾತ್ರವೇ ಮಾಡಬೇಕು (ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮಾಡಬಾರದು).
6. <u>ಒಂದು ನಿರ್ದಿಷ್ಟ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವೃತ್ತಾಕಾರವನ್ನು ಗುರುತಿಸಲಾಗಿದ್ದರೆ, ಅಂತಹ ಉತ್ತರವನ್ನು ತಪ್ಪು ಎಂದು ಪರಿಗಣಿಸಲಾಗುತ್ತದೆ ಮತ್ತು ಯಾವುದೇ ಅಂಕವನ್ನು ನೀಡಲಾಗುವುದಿಲ್ಲ. ಓ.ಎಂ.ಆರ್. ಹಾಳೆಯಲ್ಲಿನ ಉದಾಹರಣೆ ನೋಡಿ.</u>
7. ಅಭ್ಯರ್ಥಿ ಮತ್ತು ಕೊಠಡಿ ಮೇಲ್ವಿಚಾರಕರು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಓ.ಎಂ.ಆರ್. ಹಾಳೆಯ ಮೇಲೆ ಸಹಿ ಮಾಡಬೇಕು.
8. ಅಭ್ಯರ್ಥಿಯು ಪರೀಕ್ಷೆಯ ನಂತರ ಕೊಠಡಿ ಮೇಲ್ವಿಚಾರಕರಿಗೆ ಮೂಲ ಓ.ಎಂ.ಆರ್. ಉತ್ತರ ಹಾಳೆ ಮತ್ತು ವಿಶ್ವವಿದ್ಯಾನಿಲಯದ ಪ್ರತಿಯನ್ನು ಹಿಂದಿರುಗಿಸಬೇಕು.
9. ಅಭ್ಯರ್ಥಿಯು ಪ್ರಶ್ನೆ ಪುಸ್ತಕವನ್ನು ಮತ್ತು ಓ.ಎಂ.ಆರ್. ಅಭ್ಯರ್ಥಿಯ ಪ್ರತಿಯನ್ನು ತಮ್ಮ ಜೊತೆ ತೆಗೆದುಕೊಂಡು ಹೋಗಬಹುದು.
10. ಕ್ಯಾಲ್ಕುಲೇಟರ್, ಪೇಜರ್ ಮತ್ತು ಮೊಬೈಲ್ ಫೋನ್‌ಗಳನ್ನು ಪರೀಕ್ಷಾ ಕೊಠಡಿಯ ಒಳಗೆ ಅನುಮತಿಸಲಾಗುವುದಿಲ್ಲ.
11. **ಅಭ್ಯರ್ಥಿಯು ದುಷ್ಕೃತ್ಯದಲ್ಲಿ ತೊಡಗಿರುವುದು ಕಂಡುಬಂದರೆ, ಅಂತಹ ಅಭ್ಯರ್ಥಿಯನ್ನು ಕೋರ್ಸ್‌ಗೆ ಪರಿಗಣಿಸಲಾಗುವುದಿಲ್ಲ ಮತ್ತು ನಿಯಮಗಳ ಪ್ರಕಾರ ಇಂತಹ ಅಭ್ಯರ್ಥಿಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.**

## <u>ಓ.ಎಂ.ಆರ್. ಹಾಳೆಯನ್ನು ತುಂಬಲು ಸೂಚನೆಗಳು</u>

1. ಪ್ರತಿಯೊಂದು ಪ್ರಶ್ನೆಗೆ ಒಂದೇ ಒಂದು ಅತ್ಯಂತ ಸೂಕ್ತವಾದ/ಸರಿಯಾದ ಉತ್ತರವಿರುತ್ತದೆ.
2. ಪ್ರತಿ ಪ್ರಶ್ನೆಗೆ ಒಂದು ವೃತ್ತವನ್ನು ಮಾತ್ರ ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬತಕ್ಕದ್ದು. ಉತ್ತರವನ್ನು ಮಾರ್ಪಡಿಸಲು ಪ್ರಯತ್ನಿಸಬೇಡಿ.
3. ವೃತ್ತದೊಳಗಿರುವ ಅಕ್ಷರವು ಕಾಣದಿರುವಂತೆ ವೃತ್ತವನ್ನು ಸಂಪೂರ್ಣವಾಗಿ ತುಂಬುವುದು.
4. ಓ.ಎಂ.ಆರ್. ಹಾಳೆಯಲ್ಲಿ ಯಾವುದೇ ಅನಾವಶ್ಯಕ ಗುರುತುಗಳನ್ನು ಮಾಡಬೇಡಿ.

**Note** : English version of the instructions is printed on the front cover of this booklet.